Series : HGFE1

SET ~ 4

Q.P. Code 13

Roll No.

Candidates must write the Q.P. Code on the title page of the answer-book.

नोट / NOTE :

(I) ಈ ಪ್ರಶ್ನೆ ಪತ್ರಿಕೆಯಲ್ಲಿ **15** ಮುದ್ರಿತ ಪುಟಗಳಿವೆಯೆಂಬುದನ್ನು ಪರಿಶೀಲಿಸಿ.

Please check that this question paper contains **15** printed pages.

(II) ಈ ಪ್ರಶ್ನೆ ಪತ್ರಿಕೆಯಲ್ಲಿ **15** ಪ್ರಶ್ನೆಗಳಿವೆ ಎಂಬುದನ್ನು ಗಮನಿಸಿ.

Please check that this question paper contains **15** questions.

(III) ಪ್ರಶ್ನೆ ಪತ್ರಿಕೆಯ ಬಲಭಾಗದಲ್ಲಿ ಕೊಟ್ಟಿರುವ ಕೋಡ್ ಸಂಖ್ಯೆಯನ್ನು ಉತ್ತರ ಪತ್ರಿಕೆಯ ಮುಖ ಪುಟದಲ್ಲಿ ಅಭ್ಯರ್ಥಿಯು ಬರೆಯಬೇಕು.

Q.P. Code given on the right hand side of the question paper should be written on the title page of the answer-book by the candidate.

(IV) **ಉತ್ತರಿಸುವುದಕ್ಕೆ ಮೊದಲು ಪ್ರಶ್ನೆಯ ಕ್ರಮ ಸಂಖ್ಯೆಯನ್ನು ಉತ್ತರ ಪತ್ರಿಕೆಯ ಯಥಾಸ್ಥಾನದಲ್ಲಿ ಬರೆಯಿರಿ.**

**Please write down the serial number of the question in the answer-book at the given place before attempting it.**

(V) ಈ ಪ್ರಶ್ನೆ ಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳನ್ನು ಕೊಡಲಾಗಿದೆ. ಪ್ರಶ್ನೆ ಪತ್ರಿಕೆಯನ್ನು 10.15 a.m. ಗೆ ವಿತರಿಸಲಾಗುವುದು. 10.15 a.m. ನಿಂದ 10.30 a.m. ರ ತನಕ ವಿದ್ಯಾರ್ಥಿಗಳು ಪ್ರಶ್ನೆ ಪತ್ರಿಕೆಯನ್ನು ಓದಿಕೊಳ್ಳಬೇಕು ಮತ್ತು ಈ ಅವಧಿಯಲ್ಲಿ ಯಾವುದೇ ಉತ್ತರವನ್ನು ಉತ್ತರ ಪತ್ರಿಕೆಯಲ್ಲಿ ಬರೆಯಬಾರದು.

15 minute time has been allotted to read this question paper. The question paper will be distributed at 10.15 a.m. From 10.15 a.m. to 10.30 a.m., the candidates will read the question paper only and will not write any answer on the answer-book during this period.

~

# ಕನ್ನಡ

# KANNADA

*ಅನುಮತಿಸಲಾದ ಸಮಯ : **3** ಗಂಟೆ* — *ಗರಿಷ್ಠ ಅಂಕಗಳು : **80***

*Time allowed : **3** hours* — *Maximum Marks : **80***

**General Instructions :**

Read the following instructions carefully :

1. This question paper is divided into **4** Sections. It has total **15** questions.
2. **Section A** : **04** Question No. **1, 2, 3, 4.**
3. **Section B** : **03** Question No. **5, 6, 7.**
4. **Section C** : **03** Question No. **8, 9, 10.**
5. **Section D** : **05** Question No. **11 to 15.**

   Attempt questions as per specific instructions.

   Write Question No. in answer book before attempting it.

**ಸೂಚನೆಗಳು :**

**ಕೊಟ್ಟಿರುವ ಸೂಚನೆಗಳನ್ನು ಗಮನವಿಟ್ಟು ಓದಿರಿ :**

1. ಈ ಪ್ರಶ್ನೆ ಪತ್ರಿಕೆಯು **ನಾಲ್ಕು (4)** ವಿಭಾಗಗಳನ್ನು ಒಳಗೊಂಡಿದೆ. ಈ ಪ್ರಶ್ನೆ ಪತ್ರಿಕೆಯಲ್ಲಿ ಒಟ್ಟು **15** ಪ್ರಶ್ನೆಗಳಿವೆ.
2. **ವಿಭಾಗ A** : **04 ಪ್ರಶ್ನೆ ಸಂಖ್ಯೆ 1, 2, 3, 4.**
3. **ವಿಭಾಗ B** : **03 ಪ್ರಶ್ನೆ ಸಂಖ್ಯೆ 5, 6, 7.**
4. **ವಿಭಾಗ C** : **03 ಪ್ರಶ್ನೆ ಸಂಖ್ಯೆ 8, 9, 10.**
5. **ವಿಭಾಗ D** : **05 ಪ್ರಶ್ನೆ ಸಂಖ್ಯೆ 11 ರಿಂದ 15.**

   ನೀಡಿರುವ ನಿರ್ದಿಷ್ಟ ಸೂಚನೆಗಳಂತೆ ಉತ್ತರಿಸಿ.

   ಪ್ರಶ್ನೆಗಳಿಗೆ ಉತ್ತರಿಸುವ ಮೊದಲು ಉತ್ತರ ಹಾಳೆಯಲ್ಲಿ ಪ್ರಶ್ನೆ ಸಂಖ್ಯೆಯನ್ನು ನಮೂದಿಸಿ.

## PART – 1 : (40 ಅಂಕಗಳು)

## SECTION – A

### (Unseen Passage, Seen Prose & Poem)

**ವಾಚನ ಮತ್ತು ಗ್ರಹಿಕಾ ಕೌಶಲ : 20 ಅಂಕಗಳು**

1. ಕೆಳಗಿನ ಗದ್ಯಾಂಶವನ್ನು ಓದಿಕೊಂಡು, ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. **5 × 1 = 5**

ಮೊಬೈಲ್ ಫೋನ್‌ಗಳ ದೊಡ್ಡ ಪ್ರಯೋಜನವೆಂದರೆ, ಇತ್ತೀಚಿನ ದಿನಗಳಲ್ಲಿ ಜ್ಞಾನದ ಮೂಲಗಳು ವೈವಿಧ್ಯಮಯವಾಗಿವೆ. ಅಗತ್ಯವಿರುವ ಯಾವುದೇ ಮಾಹಿತಿಯನ್ನು ಸುಲಭವಾಗಿ ಪಡೆಯಬಹುದು. ಮೊಬೈಲ್‌ನಲ್ಲಿ ಕೆಲವು ಬಟನ್‌ಗಳನ್ನು ಒತ್ತುವ ಮೂಲಕ ಯಾವುದೇ ಸಮಯದಲ್ಲಿ ಸ್ನೇಹಿತರು, ಕುಟುಂಬ, ಸಹೋದ್ಯೋಗಿಗಳು ಮತ್ತು ಇತರ ಜನರನ್ನು ಸಂಪರ್ಕಿಸಬಹುದು. ವೀಡಿಯೊ ಕರೆಗಳು, ಪಠ್ಯ ಸಂದೇಶ ಕಳುಹಿಸುವಿಕೆ, ರೆಕಾರ್ಡ್ ಮಾಡಿದ ಕರೆಗಳು ಮುಂತಾದ ವೈಶಿಷ್ಟ್ಯ ಹೊಂದಿರುವ ಈ ಸಾಧನವು ಸಂವಹನವನ್ನು ಸುಲಭಗೊಳಿಸಿದೆ.

ಕೋವಿಡ್ – 19 ಸಮಯದಲ್ಲಿ ಮತ್ತು ನಂತರ, ಅನೇಕ ಶಿಕ್ಷಣ ಸಂಸ್ಥೆಗಳು ಆನ್ ಲೈನ್‌ನಲ್ಲಿ ತರಗತಿಗಳನ್ನು ಪ್ರಾರಂಭಿಸಿದವು. ಕಂಪ್ಯೂಟರ್/ಲ್ಯಾಪ್‌ಟಾಪ್ ಹೊಂದಿಲ್ಲದ ವಿದ್ಯಾರ್ಥಿಗಳು ಮೊಬೈಲ್‌ಗಳ ಮೂಲಕ ಆಸಕ್ತಿಯ ವಿಷಯಗಳ ಬಗ್ಗೆ ಅಧ್ಯಯನ ಮಾಡಲು ಅವಕಾಶವಿದೆ. ಒಂದು ರೀತಿಯಲ್ಲಿ ಮೊಬೈಲ್‌ಗಳು ಶಿಕ್ಷಣವನ್ನು ಪ್ರಪಂಚದ ದೂರದ ಮೂಲೆಗಳಿಗೆ ಕೊಂಡೊಯ್ದಿವೆ ಎಂದು ಹೇಳಬಹುದು. ದಿನನಿತ್ಯದ ಜೀವನದಲ್ಲಿ ಅಪಹರಣ, ಕಳ್ಳತನ ಅಥವಾ ಇತರ ಅನೇಕ ಅಪರಾಧ ಚಟುವಟಿಕೆಗಳ ಬಗ್ಗೆ ಕೇಳುತ್ತಿರುತ್ತೇವೆ. ವೇಗವಾಗಿ ಸಂವಹನ ಮಾಡುವ ಸಾಧನವಾಗಿರುವುದರಿಂದ, ಅಪಾಯದಲ್ಲಿ ಸಿಲುಕಿಕೊಂಡಾಗ ಪೊಲೀಸರು ಮತ್ತು ಸಂಬಂಧಿಕರಿಗೆ ಕರೆ ಮಾಡುವ ಮೂಲಕ ಸಾಧ್ಯವಾದಷ್ಟು ಬೇಗ ಸಹಾಯವನ್ನು ಪಡೆಯಬಹುದು. ಅನಾರೋಗ್ಯ, ವೈದ್ಯರ ಅಗತ್ಯವಿದ್ದರೆ ಮತ್ತು ಮನೆಯಲ್ಲಿ ಯಾರೂ ಇಲ್ಲದಿರುವ ಸಂದರ್ಭಗಳಲ್ಲಿ ಶೀಘ್ರವಾಗಿ ವಿಷಯ ತಿಳಿಸಲು ಬಳಸಬಹುದಾದ ಸಾಧನವಿದು.

ಹಾಡುಗಳನ್ನು ಕೇಳುವಾಗ, ಚಲನಚಿತ್ರಗಳನ್ನು ನೋಡುವಾಗ ಅಥವಾ ಹೆಡ್ ಸೆಟ್‌ನೊಂದಿಗೆ ದೀರ್ಘಕಾಲ ಕರೆ ಮಾಡುವುದರಿಂದ ವ್ಯಕ್ತಿಯ ಆಲಿಸುವ ಸಾಮರ್ಥ್ಯವನ್ನು ಹಾನಿಗೊಳಿಸಬಹುದು. ಹೆಚ್ಚಿನ ವಿದ್ಯಾರ್ಥಿಗಳು ಮತ್ತು ಹದಿಹರೆಯದವರು ಇದರಿಂದ ಪ್ರಭಾವಿತರಾಗಿ ಅಮೂಲ್ಯ ಸಮಯವನ್ನು ವ್ಯರ್ಥ ಮಾಡುವ ಆಟಗಳನ್ನು ಆಡಲು, ಚಲನಚಿತ್ರಗಳನ್ನು ವೀಕ್ಷಿಸಲು, ಹಾಡುಗಳನ್ನು ಕೇಳಲು ನಿರತರಾಗಿರುತ್ತಾರೆ. ಇದು ಒಳ್ಳೆಯದಲ್ಲ. ಸೈಬರ್ ಬುಲ್ಲಿಂಗ್ ಎಂದರೆ ಬೇರೆಯವರ ಬಗ್ಗೆ ನಕಾರಾತ್ಮಕ, ತಪ್ಪು ಮತ್ತು ಹಾನಿಕಾರಕ ವಿಷಯವನ್ನು ಕಳುಹಿಸುವುದು ಅಥವಾ ಹಂಚಿಕೊಳ್ಳುವುದು. ಹೆಚ್ಚಿನ ವಿದ್ಯಾರ್ಥಿಗಳು ಮತ್ತು

ಹದಿಹರೆಯದವರು ಸೈಬರ್ ಬುಲ್ಲಿಂಗ್‌ಗೆ ಒಳಗಾಗುತ್ತಿದ್ದಾರೆಂದು ಸಂಶೋಧನೆ ತೋರಿಸುತ್ತದೆ. ಇದು ಯಾರೊಬ್ಬರ ಜೀವವನ್ನು ಅಪಾಯಕ್ಕೆ ತಳ್ಳಬಹುದು. ಇದಲ್ಲದೆ, ದುಬಾರಿ ಮೊಬೈಲ್ ಫೋನ್ ವ್ಯಕ್ತಿತ್ವದ ಅಂತಸ್ತನ್ನು ನಿರ್ಧರಿಸುವ ಸಾಧನವಾಗಿದೆ. ಇದರಿಂದ ಕೆಲವೊಬ್ಬರು ಸಾಮಾಜಿಕ ಒತ್ತಡಕ್ಕೆ ಒಳಗಾಗಿ ತಮ್ಮ ಬಜೆಟ್ ಬಗ್ಗೆ ಕಾಳಜಿ ವಹಿಸದೆ ಇನ್ನೊಬ್ಬ ವ್ಯಕ್ತಿಗಿಂತ ಹೆಚ್ಚು ದುಬಾರಿ ಫೋನ್ ಖರೀದಿಸಲು ಪ್ರಯತ್ನಿಸುತ್ತಾರೆ. ಇದರಿಂದ ಆರ್ಥಿಕ ಸಂಕಷ್ಟಕ್ಕೆ ಸಿಲುಕುತ್ತಾರೆ. ಹೀಗೆ ಮೊಬೈಲ್‌ನಿಂದ ಸಾಧಕ – ಬಾಧಕಗಳಿವೆ .... ವಿವೇಚನೆಯಿಂದ ಬಳಸಬೇಕು.

**ಪ್ರಶ್ನೆಗಳು.**

I. ಹೇಳಿಕೆ - 1 : ಇತ್ತೀಚಿನ ದಿನಗಳಲ್ಲಿ ಜ್ಞಾನದ ಮೂಲಗಳು ವೈವಿಧ್ಯಮಯವಾಗಿವೆ.

ಹೇಳಿಕೆ - 2 : ಅಗತ್ಯವಿರುವ ಯಾವುದೇ ಮಾಹಿತಿಯನ್ನು ಪಡೆಯುವುದು ಕಷ್ಟ.

ಹೇಳಿಕೆ - 3 : ವೈಶಿಷ್ಟ್ಯ ಹೊಂದಿರುವ ಈ ಸಾಧನವು ಸಂವಹನವನ್ನು ಸುಲಭಗೊಳಿಸಿದೆ.

ಸರಿಯಾದ ಗುಂಪು ಆರಿಸಿ.

(A) 1 ಮತ್ತು 2 (B) 2 ಮತ್ತು 3

(C) 1 ಮತ್ತು 3 (D) 3 ಮತ್ತು 2

II. ಮೊಬೈಲ್‌ಗಳು ಶಿಕ್ಷಣವನ್ನು ಪ್ರಪಂಚದ ದೂರದ _____ ಕೊಂಡೊಯ್ದಿವೆ ಎಂದು ಹೇಳಬಹುದು.

(A) ದೇಶಕ್ಕೆ (B) ಮನೆಗೆ

(C) ಊರಿಗೆ (D) ಮೂಲೆಗೆ

III. ಅಪಾಯದಲ್ಲಿ ಸಿಲುಕಿಕೊಂಡಾಗ _____ _____ ಸಹಾಯ ಪಡೆಯಬಹುದು.

(A) ಪೊಲೀಸರು – ಗೆಳೆಯರಿಂದ (B) ಪೊಲೀಸರು – ಸಂಬಂಧಿಕರಿಂದ

(C) ಹಿರಿಯರು – ಸಂಬಂಧಿಕರಿಂದ (D) ಪೊಲೀಸರು –ಅಧಿಕಾರಿಗಳಿಂದ

IV. ಸೈಬರ್ ಬುಲ್ಲಿಂಗ್ ಎಂದರೆ ಬೇರೆಯವರ ಬಗೆ _____ _____ _____ ವಿಷಯಗಳನ್ನು ಕಳುಹಿಸುವುದು.

(A) ನಕಾರಾತ್ಮಕ, ಸರಿಯಾದ, ಹಾನಿಕಾರಕ (B) ಧನಾತ್ಮಕ, ತಪ್ಪು, ಹಾನಿಕಾರಕ

(C) ನಕಾರಾತ್ಮಕ, ತಪ್ಪು, ಹಾನಿಕಾರಕ (D) ಸಕಾರಾತ್ಮಕ, ಧನಾತ್ಮಕ, ಸರಿಯಾದ

V. ದುಬಾರಿ ಮೊಬೈಲ್ ಫೋನ್ ವ್ಯಕ್ತಿತ್ವದ _____ ನಿರ್ಧರಿಸುವ ಸಾಧನವಾಗಿದೆ.

(A) ಅಂತಸ್ತನ್ನು (B) ಶ್ರೀಮಂತಿಕೆಯನ್ನು

(C) ಜಾಣ್ಮೆಯನ್ನು (D) ಬುದ್ಧಿವಂತಿಕೆಯನ್ನು

2. ಕೆಳಗಿನ ಗದ್ಯಾಂಶವನ್ನು ಓದಿಕೊಂಡು, ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. **5 × 1 = 5**

ತಮ್ಮ ಸುಖಸೌಕರ್ಯಗಳನ್ನು ಚಿಂತಿಸದೆ, ಬಹು ಜನರ ಹಿತಕ್ಕಾಗಿ ಯಾವ ಪ್ರತಿಫಲಾಪೇಕ್ಷೆ ಇಲ್ಲದೆ ದುಡಿಯುವವರು ಕೆಲವರು. ತಮ್ಮ ವೈಯಕ್ತಿಕ ಕಷ್ಟ ಸಂಕಟಗಳನ್ನು ಗಮನಿಸದೆ ಪರೋಪಕಾರದಲ್ಲೇ ತಲ್ಲೀನರಾದ ಇವರನ್ನು ಕವಿ ಸತ್ಪುರುಷರು ಎಂದು ಹೆಸರಿಸುತ್ತಾನೆ. ಇನ್ನು ಕೆಲವರು ತಮ್ಮ ಆಸೆ – ಆಕಾಂಕ್ಷೆಗಳನ್ನು ಸರಿಯಾದ ರೀತಿಯಲ್ಲಿ ಸಾಧಿಸಿಕೊಳ್ಳುತ್ತ, ಇತರರಿಗೆ ತಮ್ಮಿಂದಾದ ಉಪಕಾರವನ್ನು ಮಾಡುವರು. ಆದರೆ ಯಾವ ಸ್ವಾರ್ಥವೂ ಇಲ್ಲದೆ, ಸದಾ ಇತರರಿಗೆ ಕೇಡನ್ನು ಬಗೆಯುವವರನ್ನು ಏನೆಂದು ಹೆಸರಿಸಲಿ? ಎಂಬುದೇ ತನಗೆ ತಿಳಿಯದೆಂದು ಕವಿ ಹೇಳುತ್ತಾನೆ.

ಮಾನವರಲ್ಲಿ ನಿದ್ರಾ ಮಾನವರಿದ್ದಾರೆ. ದುಡಿಮೆಯ ಮಾನವರಿದ್ದಾರೆ. ಚಿಂತನಶೀಲ ಮಾನವರಿದ್ದಾರೆ. ನಿದ್ರೆ ಎಲ್ಲರಿಗೂ ಬರುತ್ತದೆ. ಎಲ್ಲರಿಗೂ ಗಾಢನಿದ್ರೆಯ ಅನುಭವವಿದೆ. ಹಾಗೆಂದು ನಿದ್ರೆ ಎಲ್ಲರಿಗೂ ಸಮಾನವಲ್ಲ. ಕೆಲವರಿಗೆ ಎಷ್ಟು ನಿದ್ದೆ ಮಾಡಿದರೂ ತೃಪ್ತಿಯಿಲ್ಲ. ಕೆಲವರಿಗೆ ಆರು ಗಂಟೆ ನಿದ್ರೆ ಸಾಕು. ವಿಜ್ಞಾನಿ ನಿಕೋಲಾಯ್ ಟೆಸ್ಲಾ ಒಮ್ಮೆ ಎಪ್ಪತ್ತಾರು ಗಂಟೆಗಳ ಕಾಲ ಪ್ರಯೋಗಶಾಲೆಯಲ್ಲಿ ಎಚ್ಚೆತ್ತು ಸಂಶೋಧನೆಯಲ್ಲಿ ಮಗ್ನನಾಗಿದ್ದ ಎನ್ನುತ್ತಾರೆ. ಸ್ವಾಮಿ ವಿವೇಕಾನಂದರು ಪರಿವ್ರಾಜಕ ದಿನಗಳಲ್ಲಿ ಒಮ್ಮೆ ಮೂರು ದಿನಗಳ ಕಾಲ ಏಕಪ್ರಕಾರ ಮಾತನಾಡಿ, ನಿದ್ರಾಜಯಿಗಳಾಗಿ, ದಾಖಲೆ ಸ್ಥಾಪಿಸಿದ ಅತಿಮಾನುಷ ವ್ಯಾಪಾರವನ್ನು, ತಾವೇ ಶಿಷ್ಯರ ಹತ್ತಿರ ಮಾತನಾಡುತ್ತ ತಿಳಿಸಿದ್ದರು.

ಜೀವನದಲ್ಲಿ ಪಾಠವನ್ನು ಕಲಿಯುವಲ್ಲೂ ವೈವಿಧ್ಯವಿದೆ. ಇತರರು ತಪ್ಪು ಮಾಡಿದ ಬಳಿಕ ದುಃಖ ಅನುಭವಿಸುವುದನ್ನು ಕಂಡು ಪಾಠ ಕಲಿಯುವವರು ಒಂದು ವರ್ಗ. ತಾವು ತಪ್ಪು ಮಾಡಿ ನೋವು ತಿಂದು ಮತ್ತೆ ಪಾಠ ಕಲಿಯುವವರು ಇನ್ನೊಂದು ವರ್ಗ. ತಪ್ಪು ಮಾಡಿ ಎಷ್ಟು ದುಃಖ ಅನುಭವಿಸಿದರೂ ಪಾಠ ಕಲಿಯದವರದು ಮತ್ತೊಂದು ವರ್ಗ.

ಮನುಷ್ಯರನ್ನು ಅವರ ಚಾರಿತ್ರ್ಯ ವೈಶಿಷ್ಟ್ಯಕ್ಕೆ ಅನುಗುಣವಾಗಿ ನಿಯಂತ್ರಿಸಲು ಉಪಯೋಗಿಸುವ ಉಪಾಯಗಳು ನಾಲ್ಕು ಎಂದು ಹಿತೋಪದೇಶದಲ್ಲಿ ಹೇಳಿದ್ದಾರೆ. ವಿಶ್ವಾಸದಿಂದ ಹೇಳುವ ಬುದ್ಧಿಮಾತು ಒಂದು ವಿಧ. ಇದನ್ನು ಸಾಮವೆಂದು ಕರೆಯುತ್ತಾರೆ. ಎಲ್ಲೋ ಕೆಲವರು ಈ ಉಪಾಯಕ್ಕೆ ಒಲಿಯುವರು. ಬಹುಮಾನದ ಭರವಸೆ ನೀಡಿ ಹೇಳುವ ಮಾತು ಹಲವರಿಗೆ ಅಪ್ಯಾಯಮಾನವೆನಿಸೀತು – ಅದೇ ದಾನ. ಮೂರನೆಯದೇ ಭೇದ – ಪೈಪೋಟಿಯ ಭಾವನೆಯನ್ನು ಉಂಟು ಮಾಡಿ ಕೆಲಸ ಮಾಡಿಸುವುದು. ಕೊನೆಯದೇ ದಂಡ – ಭಯದಿಂದ ಎಚ್ಚರಿಕೆಯನ್ನು ಕೊಟ್ಟು ಕೆಲಸ ಮಾಡಿಸುವುದು. ಅಪರಾಧಕ್ಕೆ ಸರಿಯಾದ ದಂಡವನ್ನು ವಿಧಿಸುವುದು ರಾಜನ ಕರ್ತವ್ಯ ಎಂಬ ಭಾವನೆ ಹಿಂದೆ ಇತ್ತು.

ಕೌಟುಂಬಿಕ ಜೀವನದಲ್ಲಾಗಲಿ, ಸಾಂಘಿಕ, ಸಾಮಾಜಿಕ ಜೀವನದಲ್ಲಾಗಲಿ, ವ್ಯಕ್ತಿ – ವ್ಯಕ್ತಿಗಳೊಳಗಿನ ಮಧುರ ಬಾಂಧವ್ಯದ ಮೂಲಸೂತ್ರ ಯಾವುದು ? ಸ್ವಾರ್ಥತ್ಯಾಗ, ಒಣಜಂಭ, ಅಹಂಕಾರವನ್ನು ದೂರ ಮಾಡಿ, ತಾಳ್ಮೆಯಿಂದ ತನ್ನ ಕರ್ತವ್ಯ ಪಾಲನೆಯ ಮೂಲಕ, ವಿಶ್ವ ನಿಯಾಮಕನನ್ನು ತುಷ್ಟಿಗೊಳಿಸಬೇಕೆನ್ನುವ ವ್ಯಕ್ತಿ ಶಾಂತಚಿತ್ತನಾಗಬಲ್ಲ.

**ಪ್ರಶ್ನೆಗಳು .**

I. ತಮ್ಮ ವೈಯಕ್ತಿಕ ಕಷ್ಟ ಸಂಕಟಗಳನ್ನು ಗಮನಿಸದೇ ಪರೋಪಕಾರದಲ್ಲೇ ತಲ್ಲೀನರಾದವರು ...

(A) ಮಹಾಪುರುಷರು (B) ಸತ್ಪುರುಷರು

(C) ವೀರಪುರುಷರು (D) ಅಸಾಮಾನ್ಯರು

II. ನಿಕೋಲಾಯ್ ಟೆಸ್ಲಾ ಇವರೊಬ್ಬ _____

(A) ರಾಜಕಾರಣಿ (B) ಶಿಕ್ಷಕ

(C) ಪರಿವ್ರಾಜಕ (D) ವಿಜ್ಞಾನಿ

III. ಜೀವನದಲ್ಲಿ ಪಾಠ ಕಲಿಯುವವರನ್ನು _____ ವರ್ಗಗಳಲ್ಲಿ ವಿಂಗಡಿಸಲಾಗಿದೆ.

(A) 3 (B) 4 (C) 2 (D) 5

IV. ಮನುಷ್ಯರನ್ನು ಅವರ ಚಾರಿತ್ರ್ಯ ವೈಶಿಷ್ಟ್ಯಕ್ಕೆ ಅನುಗುಣವಾಗಿ ನಿಯಂತ್ರಿಸಲು ಉಪಯೋಗಿಸುವ ಉಪಾಯಗಳು.

1. ಸಾಮ, ದಾನ 2. ಸಾಮ, ಭೇದ

3. ಭೇದ, ದಾನ 4. ಭೇದ, ದಂಡ

ಅನುಕ್ರಮವಾಗಿರುವ ಸರಿಯಾದ ಗುಂಪು ಆರಿಸಿ.

(A) 1 ಮತ್ತು 2 (B) 1 ಮತ್ತು 3 (C) 1 ಮತ್ತು 4 (D) 2 ಮತ್ತು 4

V. ಮಧುರ ಬಾಂಧವ್ಯದ ಮೂಲಸೂತ್ರ ಯಾವುದು ?

(A) ಹೋರಾಟ (B) ಅಹಂಕಾರ

(C) ಗಳಿಕೆ (D) ಸ್ವಾರ್ಥತ್ಯಾಗ

3. ಕೆಳಗೆ ಕೊಟ್ಟಿರುವ ಎ.ಎನ್. ಮೂರ್ತಿರಾವ್ ಅವರು ಬರೆದಿರುವ ವ್ಯಾಘ್ರಗೀತೆ ಪರಿಚಿತ ಗದ್ಯಭಾಗವನ್ನು ಓದಿಕೊಂಡು, ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. **5 × 1 = 5**

ಕೃಷ್ಣಮೂರ್ತಿಯ ಅಜ್ಜಂದಿರು ತುಮಕೂರು ಜಿಲ್ಲೆಯ ಒಂದು ಹಳ್ಳಿಯವರು. ಅವರ ಹಿರಿಯರು ಸಣ್ಣದೊಂದು ಸಂಸ್ಥಾನದಲ್ಲಿ ಮಂತ್ರಿಯಾಗಿದ್ದು ತಮ್ಮ ರಾಜಭಕ್ತಿಗಾಗಿ ಹೆಸರು ಪಡೆದವರು. ನಮ್ಮ ಕಥಾನಾಯಕರ ಕಾಲಕ್ಕೆ ಮಂತ್ರಿತ್ವ ಹೋಗಿ ಕೇವಲ ಶಾನುಭೋಗಿಕೆ ಮಾತ್ರ ಉಳಿದಿತ್ತು . ಆದರೂ ಶಾನುಭೋಗರು ತಮ್ಮ ವಂಶದ ಕೀರ್ತಿಗೆ ಕುಂದು ತರದಂತೆ ಖಿರ್ದಿ ಪುಸ್ತಕವನ್ನು ನಿಷ್ಠೆಯಿಂದ ಕಾಪಾಡಿಕೊಂಡು ಮನೆಯ ಕಾಣಿಕೆಗಾಗಿ ರೈತರನ್ನು ಪೀಡಿಸದೆ, ದೇವರು ಕೊಟ್ಟಷ್ಟರಲ್ಲಿ ತೃಪ್ತಿಗೊಂಡು ಜೀವನ ನಡೆಸುತ್ತಿದ್ದರು. ಅವರ ಭಾಗಕ್ಕೆ ಖಿರ್ದಿ ಪುಸ್ತಕ ಕೇವಲ ಜೀವನದ ಆಧಾರವಲ್ಲ , ಅವರ ರಾಜಭಕ್ತಿಯ ಲಾಂಛನ.

ಒಂದು ಬಾರಿ ಅವರು ಇರಸಾಲಿಗಾಗಿ ಚಿಕ್ಕನಾಯಕನ ಹಳ್ಳಿಗೆ ಹೋಗಿದ್ದರು. ಖಜಾನೆಗೆ ಹಣ ಕಟ್ಟಿ, ಸ್ನೇಹಿತರನ್ನು ನೋಡಿಕೊಂಡು ಅಲ್ಲಿಂದ ವಾಪಸ್ಸು ಹೊರಡುವ ವೇಳೆಗೆ ಸಂಜೆ ಆರು ಘಂಟೆಯಾಗಿತ್ತು. ಅವರು ತಮ್ಮ ಹಳ್ಳಿಯನ್ನು ತಲುಪಬೇಕಾದರೆ ಮದಲಿಂಗನ ಕಣಿವೆಯನ್ನು ದಾಟಿ ಹೋಗಬೇಕು. ಕಾಡುದಾರಿ, ಆದರೂ ಬೆಳುದಿಂಗಳ ದಿನ, ಸ್ವಲ್ಪ ದೊಡ್ಡ ಹೆಜ್ಜೆ ಹಾಕಿದರೆ ಊಟದ ಹೊತ್ತಿಗೆ ಊರು ಸೇರಿಕೊಳ್ಳಬಹುದು ಎಂದುಕೊಂಡು ಬೇಗಬೇಗ ನಡೆದರು. ಆದರೂ ಕಣಿವೆಗೆ ಬರುವ ವೇಳೆಗೆ ಆಗಲೇ ರಾತ್ರಿ ಹೆಜ್ಜೆಯಿಟ್ಟಿತ್ತು. ಹಸಿವಿನ ಜೊತೆಗೆ ಭಯವೂ ಸೇರಿ ಅವರ ಕಾಲು ಚುರುಕಾಯಿತು.

ರಸ್ತೆಗೆ ಸ್ವಲ್ಪ ದೂರದಲ್ಲೇ ಇದ್ದ ಗುಹೆಯಲ್ಲಿ ಹುಲಿಯೊಂದು ಮಲಗಿತ್ತು. ದಿನವೆಲ್ಲಾ ನಿದ್ದೆಮಾಡಿ ಆಗ ತಾನೆ ಆಕಳಿಸುತ್ತ ಎದ್ದ ಹುಲಿಗೆ ತನ್ನ ಹೊಟ್ಟೆ ಬರಿದಾಗಿದೆಯೆಂದು ಭಾಸವಾಯಿತು. ವಿಧಿ ಆಹಾರಕ್ಕೆ ಏನನ್ನು ಒದಗಿಸುವುದೋ ಎಂದು ಯೋಚಿಸುತ್ತಾ ಒಂದೆರಡು ಸಾರಿ ಮೈಮುರಿದು ಹೊರಟಿತು. ಬಂಡೆಗಳ ಮರೆಯಲ್ಲೇ ನಡೆಯುತ್ತಿದ್ದಾಗ ಇದ್ದಕ್ಕಿದ್ದ ಹಾಗೆಯೇ ಮಧುರವಾದ ಗಂಧವೊಂದು ಅದರ ಘ್ರಾಣೇಂದ್ರಿಯವನ್ನು ಆಕ್ರಮಿಸಿತು. ಆ ಸುವಾಸನೆಯ ಜಾಡನ್ನೇ ಹಿಡಿದು ನಿಶ್ಶಬ್ಧವಾಗಿ ನಡೆಯುತ್ತಾ ರಸ್ತೆಯ ಬಳಿಗೆ ಬಂದು ಶಾನುಭೋಗರನ್ನು ಕಂಡಿತು. ಅವರ ದುಂಡುದುಂಡಾದ ಶರೀರವನ್ನು ನೋಡಿ ಹುಲಿಗೆ ಪರಮಾನಂದವಾಯಿತು. ಹುಲಿಯ ಆನಂದಕ್ಕೆ ಕೊರತೆ ಒಂದಿತ್ತು. ಆ ಶಾನುಭೋಗರು ಹುಲಿಗೆ ಅಭಿಮುಖರಾಗಿರದೆ ಅದರ ಕಡೆಗೆ ಬೆನ್ನು ತಿರುಗಿಸಿ ನಡೆಯುತ್ತಿದ್ದರು. ಯಾರನ್ನೇ ಆಗಲಿ, ಭರತಖಂಡದ ಹುಲಿಗಳು ಹಿಂದಿನಿಂದ ಹಾರಿ ಕೊಲ್ಲುವುದಿಲ್ಲ. ಶತ್ರುವನ್ನಾದರೂ ಸರಿಯೆ, ಆತ ಬೆನ್ನು ತಿರುಗಿಸಿರುವಾಗ ಕೊಲ್ಲುವುದು ಧರ್ಮವಲ್ಲವಷ್ಟೆ.
ಆದ್ದರಿಂದ ಹುಲಿ ಹೇಗಾದರೂ ಮಾಡಿ ಶಾನುಭೋಗರಿಗೆ ಅಭಿಮುಖವಾಗಿ ಬರಬೇಕು. ಆದರೆ ಅವರನ್ನು ಹಾದು ಮುಂದೆ ಹೋಗುವುದು ಕಷ್ಟ. ನಿಶ್ಶಬ್ಧವಾಗಿ ಅವನ ಹಿಂದೆಯೇ ನಡೆದು, ಅನಂತರ ಅವನ ಮುಂಭಾಗಕ್ಕೆ ನೆಗೆದು, ಕೂಡಲೆ ತಿರುಗಿ ಅವನ ಮೇಲೆ ಬೀಳಬೇಕು. ತನ್ನ ಬಡಬಂಧುವಾದ ಬೆಕ್ಕಿನಂತೆ ದೇಹವನ್ನು ಹುದುಗಿಸಿಕೊಂಡು ಹುಲಿ ಮೆಲ್ಲಮೆಲ್ಲನೆ ಶಾನುಭೋಗರ ಹತ್ತಿರ ಸರಿಯಿತು.

**ಪ್ರಶ್ನೆಗಳು.**

I. ಶಾನುಭೋಗರು ಹೇಗೆ ತಮ್ಮ ಜೀವನ ನಡೆಸುತ್ತಿದ್ದರು ?

II. ಶಾನುಭೋಗರು ಇರಸಾಲಿಗಾಗಿ ಎಲ್ಲಿಗೆ ಹೋಗಿದ್ದರು ?

III. ಮದಲಿಂಗನ ಕಣಿವೆಯಲ್ಲಿ ಬರುವಾಗ ಶಾನುಭೋಗರು ಏನೆಂದು ಯೋಚಿಸಿದರು ?

IV. ಹುಲಿಗೆ ಪರಮಾನಂದವಾಗಲು ಕಾರಣವೇನು ?

V. ಹುಲಿಯು ಶಾನುಭೋಗರ ಹತ್ತಿರ ಹೇಗೆ ಸರಿಯಿತು ?

4. ಕೆಳಗೆ ಕೊಟ್ಟಿರುವ ಡಾ. ಬಿ.ಎಸ್. ಗದ್ದಗಿಮಠ ಅವರು ಸಂಪಾದಿಸಿರುವ 'ಕನ್ನಡ ಜನಪದ ಗೀತೆಗಳು' ಕೃತಿಯಿಂದ ಆಯ್ದ ಪರಿಚಿತ 'ಹಲಗಲಿ ಬೇಡರು' ಲಾವಣಿಯನ್ನು ಓದಿಕೊಂಡು, ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. **5 × 1 = 5**

ಬೆನ್ನ ಬೆನ್ಹತ್ತಿ ತಿರಿತಿರ್ವಿ ಕಡಿದರೊ ಏನು ಉಳಿಯದ್ಹಂಗ
ನಡುವೆ ಹಾಕ್ಕೊಂಡು ಹೊಡೆದರೊ ಗುಂಡ ಕರುಣ ಇಲ್ಲದ್ಹಂಗ
ಚಟೆಕಾರರು ಚೌಕಿ ಮಾಡುತ, ನಡಿದರೊ ಹೇಳದೆ ಗುಡದಾಗ
ಅಗಸಿಗೆ ಬಂದು 'ಹೆಬಲಕ' ಸಾಬ ಹೇಳತಾನ ಬುದ್ಧಿಮಾತ
ಕೊಡುತಿವಿ ಕಬುಲ ಕೇಳರಿ ಮಾತ, ಹೋಗಬ್ಯಾಡರಿ ಸತ್ತ
ಅನುವ ಮಾತಿಗೆ ನಂಬಿಗೆ ಸಾಲದೆ 'ಹನುಮ' ಬಂದನೊ ಮುಂದಿತ್ತ
ಜಡಗ ಹೇಳತಾನೂ ಹೊಡೆಯಿರಿ ಇವರ ಪೂರ ಘಾತಕರಾ
ಇಸವಾಸಘಾತಕ ಮಾಡಿದರಿವರ, ನಂಬಿಗಿಲ್ಲ ನಮಗ ಪಿತೂರಾ
ಮೋಸ ಮಾಡಿ ನಮದೇಶ ಗೆದಿತಾರೊ ಮುಂದ ನಮಗ ಘೋರಾ
ಅಂದು ಹೊಡೆದಾನೊ ಒಂದು ಗುಂಡಿಗೆ ಆದ ಸಾಹೇಬನ ಟಾರಾ
'ಕಾರ' ಸಾಹೇಬ ಬೆಂಕಿ ಚೂರಾದ ಲೂಟಿ ಮಾಡಂತನೊ ಊರಾ
ಸಿಟ್ಟಲೆ ಹೊಡೆದರು ಸಿಡಿಲಸಿಡಿದ್ಹಾಂಗ ಗುಂಡು ಸುರಿದಾವ ಭರಪೂರ
ಹನುಮ ಹೇಳತಾನ ಗುಂಡು ಹೊಡಿದು ಕೆರ ಕೆಡವು ನಷ್ಟ ಬಾರ
ಮುನ್ನೂರ ಮಂದಿ ಮೈದ್ಯೊಗ ಬಂದರ ಆಗ ನೋಡೊ ಜೋರಾ
ಭೀಮನು ಇದುರಿಗೆ ನಿಂತಾ ಐನೂರ್ಮಂದಿಗೆ ಮತ್ತಾ.

ಬಾಲನು ಮಾಡಿದ ಕಸರತ್ತಾ, ಕುದುರಿಯ ಕಡಿದು ಹತ್ತಿಪ್ಪತ್ತಾ.

ರಾಮನ ಕಡಿತ ವಿಪರೀತಾ, ಕಾಲುವೆ ಹರಿತೊ ರಕ್ತ.

ಸಾವಿರ ಆಳಿಗೆ ಒಬ್ಬ ಕೂಗತಾನೊ, ಕಡಿಕಡಿರಿ ಅಂತ ಮತ್ತ

ನಾಲ್ಕು ಮಂದಿ ಹಿಂಗ ಕಡಿದು ಸತ್ತರೊ ಹಲಗಲಿ ಬಂಟರಣ್ಣ ಜನಕ

ಕೊಡಲಿ ಕೋರೆ ಕುಡ ಕಬ್ಬಿಣ ಮೊಸರು ಬೆಣ್ಣೆ ಹಾಲಾ

ಉಪ್ಪು ಎಣ್ಣೆ ಅರಿಸಿಣ ಜೀರಿಗಿ, ಅಕ್ಕಿ ಸಕ್ಕರಿ ಬೆಲ್ಲ

ಗಂಗಳ ಚರಗಿ ಮಂಗಳ ಸೂತ್ರ ಹೋದವು ಬೀಸುಕಲ್ಲಾ

ಹಾಳಾಗಿ ಹೋಯಿತು ಅತ್ತು ವರ್ಣಿಸಿ ಹೇಳಲಿ ನಾನೆಷ್ಟಾ

ಸಿಕ್ಕಿದ್ದು ತಗೊಂಡು ಸರದ ನಿಂತರೊ ಊರಿಗೆ ಕೊಳ್ಳಿ ಕೊಟ್ಟಾ

ಬೂದಿ ಮಾಡ್ಯಾರೊ. ಹಲಗಲಿ ಸುಟ್ಟು ಗುರ್ತುಳಿಯಲಿಲ್ಲೆಳ್ಳಷ್ಟು

ಕಾಣದೆ ಹೋಯಿತೊ ಕೆಟ್ಟು ವರ್ಣಿಸಿ ಹೇಳಿದೆ ಕಂಡಷ್ಟು

ಕುರ್ತಕೋಟಿ ಕಲ್ಮೇಶನ ದಯದಿಂದ ಹಾಡಿದೆನಣ್ಣಾ ಜನಕ

**ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

I. ಚಟೆಗಾರರು ಚೌಕಿ ಮಾಡುತ್ತ ಎಲ್ಲಿಗೆ ನಡೆದರು ?

II. ಜಡಗ ಬ್ರಿಟಿಷರ ಬಗ್ಗೆ ಏನೆಂದು ಹೇಳಿದನು ?

III. ಸಿಡಿಲು ಸಿಡಿದ ಹಾಗೆ ಏನು ಸಿಡಿದವು ?

IV. ರಾಮನ ಕಡಿತದಿಂದ ಏನಾಯಿತು ?

V. ಏನೇನು ಲೂಟಿ ಮಾಡಿದರು ?

## SECTION – B

### (Grammar, Non detailed Portion)

### ಅನ್ವಯಿಕ ವ್ಯಾಕರಣ ಮತ್ತು ಪಠ್ಯಪೂರಕ ಅಧ್ಯಯನ : 20 ಅಂಕಗಳು

5. ಕೆಳಗಿನ ಪ್ರತಿಯೊಂದು ಬಹುಆಯ್ಕೆಯ ಪ್ರಶ್ನೆಗಳಿಗೆ ನಾಲ್ಕು ಉತ್ತರಗಳನ್ನು ಕೊಡಲಾಗಿದೆ. ಅವುಗಳಲ್ಲಿ ಸರಿಯಾದ ಪದವನ್ನು ಆರಿಸಿ ಬರೆಯಿರಿ. **10 × 1 = 10**

I. ಕೆಳಗೆ ಕೊಟ್ಟಿರುವ ಸಂಧಿ ಮತ್ತು ಸಂಧಿ ಪದಗಳನ್ನು ಹೊಂದಿಸಿ ಬರೆಯಿರಿ.

| | | | |
|---|---|---|---|
| a. | ಸನ್ಮಾನ | 1. | ಆಗಮ ಸಂಧಿ |
| b. | ಬಲ್ಲೆನೆಂದು | 2. | ಗುಣ ಸಂಧಿ |
| c. | ಸುರಾಸುರ | 3. | ಅನುನಾಸಿಕ ಸಂಧಿ |
| d. | ವೇದಿಯಲ್ಲಿ | 4. | ಸವರ್ಣದೀರ್ಘ ಸಂಧಿ |
| | | 5. | ಲೋಪ ಸಂಧಿ |

(A) a – 3 b – 5 c – 4 d – 1
(B) a – 3 b – 1 c – 2 d – 4
(C) a – 3 b – 5 c – 2 d – 4
(D) a – 2 b – 5 c – 4 d – 1

II. ಬೇಸಗೆ – ಕಜ್ಜ – ಈ ಪದಗಳ ತತ್ಸಮ ರೂಪಗಳು

(A) ಬೆಸುಗೆ – ಕಾಯ (B) ವೈಶಾಖ – ಕಾರ್ಯ
(C) ವರುಷ – ಕಪಿ (D) ಬೆವರು – ಕಾರ್ಯ

III. ಕೆಳಗಿನ ಪದಗಳಲ್ಲಿ ಸರಿಯಾದ ಸಮಾಸ ಪದಗಳನ್ನು ಆರಿಸಿ ಬರೆಯಿರಿ.

1. ಮಲ್ವಾತು – ದ್ವಂದ್ವ ಸಮಾಸ
2. ಮುಂದಲೆ – ಅಂಶಿ ಸಮಾಸ
3. ಮೂಗಾವುದ – ದ್ವಿಗು ಸಮಾಸ
4. ಕೈಯಾನು – ತತ್ಪುರುಷ ಸಮಾಸ

(A) 1 ಮತ್ತು 2 (B) 2 ಮತ್ತು 4
(C) 1 ಮತ್ತು 3 (D) 2 ಮತ್ತು 3

IV. ಹಕ್ಕಿಗಳು ಪಟಪಟನೆ ರೆಕ್ಕೆ ಬಡಿಯುತ್ತಾ ಸಾಲುಸಾಲಾಗಿ ಹಾರಬಲ್ಲವು – ಇಲ್ಲಿರುವ ದ್ವಿರುಕ್ತಿ ಪದ

(A) ಹಕ್ಕಿಗಳು (B) ಸಾಲುಸಾಲಾಗಿ

(C) ಬಡಿಯುತ್ತಾ (D) ಪಟಪಟನೆ

V. ಕಸವರ – ಪದದ ಅರ್ಥ

(A) ಬಂಗಾರ (B) ಬೆಳ್ಳಿ (C) ಕಬ್ಬಿಣ (D) ವಜ್ರ

VI. ನಾನು, ನಾವು – ಇವು ಈ ಪುರುಷಾರ್ಥಕ ಸರ್ವನಾಮಗಳು.

(A) ಪ್ರಥಮ ಪುರುಷ (B) ಶ್ರೇಷ್ಠ ಪುರುಷ

(C) ಉತ್ತಮ ಪುರುಷ (D) ಮಧ್ಯಮ ಪುರುಷ

VII. ಸಪ್ತಮೀ ವಿಭಕ್ತಿ ಪ್ರತ್ಯಯವಿರುವ ಪದವಿದು

(A) ಮರದಿಂ (B) ಮರದತ್ತಣಿಂ

(C) ಮರದ (D) ಮರದೊಳ್

VIII. ಭಾರತವು, ಪ್ಯಾರಿಸ್ ಒಲಿಂಪಿಕ್ಸ್ ನಲ್ಲಿ ಆರು ಪದಕಗಳನ್ನು ಪಡೆದು ಎಪ್ಪತ್ತೊಂದನೆಯ ಸ್ಥಾನದಲ್ಲಿದೆ – ಇಲ್ಲಿರುವ ಸಂಖ್ಯೇಯ ವಾಚಕ

(A) ಪದಕ (B) ಆರು

(C) ಎಪ್ಪತ್ತೊಂದನೆಯ (D) ಪ್ಯಾರಿಸ್

IX. ತೇನ್‌ಸಿಂಗ್ ಅವರು ಛಲಬಿಡದೆ ಹಿಮಾಲಯ ಪರ್ವತವನ್ನು ಏರಿಯೇ ಬಿಟ್ಟರು – ಇಲ್ಲಿರುವ ರೂಢನಾಮ

(A) ಬಿಟ್ಟರು (B) ತೇನ್‌ಸಿಂಗ್

(C) ಪರ್ವತ (D) ಅವರು

X. ಅನುಕೂಲ – ಆಯಾಸ – ಈ ಪದಗಳ ವಿರುದ್ಧ ಪದಗಳು

(A) ಅನುಕೂಲ – ನಿರಾಯಾಸ (B) ಕೂಲ – ಯಾಸ

(C) ನಿರಾಯಾಸ – ಅನುಕೂಲ (D) ಅನಾನುಕೂಲ – ನಿರಾಯಾಸ

6. ಕೆಳಗಿನವುಗಳನ್ನು ಸೂಚನೆಯಂತೆ ಬರೆಯಿರಿ. **5 × 1 = 5**

I. ವಿದ್ಯಾರ್ಥಿಗಳು ಸರಿಯಾದ ಸಮಯಕ್ಕೆ ಶಾಲೆಗೆ ಹೋದರು – ಪ್ರಶ್ನಾರ್ಥಕ ವಾಕ್ಯವನ್ನಾಗಿ ಪರಿವರ್ತಿಸಿ ಬರೆಯಿರಿ.

II. ಮಕ್ಕಳು ಕನ್ನಡ ಕಾದಂಬರಿಗಳನ್ನು ಓದಿದರು – ಕರ್ಮಣಿ ವಾಕ್ಯವನ್ನಾಗಿ ಪರಿವರ್ತಿಸಿ ಬರೆಯಿರಿ.

III. ವನ ಮಹೋತ್ಸವದ ಕಾರ್ಯಕ್ರಮವು ವಿಜೃಂಭಣೆಯಿಂದ ಜರುಗಿತು – ವಿಧ್ಯರ್ಥಕ ವಾಕ್ಯವನ್ನಾಗಿ ಪರಿವರ್ತಿಸಿ ಬರೆಯಿರಿ.

IV. ಈ ಕೆಳಗಿನ ಗಾದೆ ಮಾತಿನ ಅರ್ಥವನ್ನು ಬರೆಯಿರಿ.

ಹಾಸಿಗೆ ಇದ್ದಷ್ಟು ಕಾಲು ಚಾಚು

**ಅಥವಾ (OR)**

ಗುಣ ನೋಡಿ ಗೆಳೆತನ ಮಾಡು

V. ಕಕ್ಕಾಬಿಕ್ಕಿ – ಈ ಪದವನ್ನು ಬಳಸಿ ಸ್ವಂತ ವಾಕ್ಯ ರಚಿಸಿ ಬರೆಯಿರಿ.

7. ಕೆಳಗಿನ ಪ್ರತಿಯೊಂದು ಪ್ರಶ್ನೆಗೆ ನಾಲ್ಕು ಉತ್ತರಗಳನ್ನು ಕೊಡಲಾಗಿದೆ. ಅವುಗಳಲ್ಲಿ ಸರಿಯಾದ ಪದವನ್ನು ಆರಿಸಿ ಬರೆಯಿರಿ. **5 × 1 = 5**

I. ಗಾಂಧೀಜಿಯವರು 'ಅನ್ ಟು ದಿಸ್ ಲಾಸ್ಟ್ ' ಪುಸ್ತಕವನ್ನು ಸರ್ವೋದಯ ಹೆಸರಿನಿಂದ _______ ಭಾಷೆಗೆ ಅನುವಾದ ಮಾಡಿದ್ದಾರೆ.

(A) ಹಿಂದಿ (B) ಕನ್ನಡ

(C) ಪಂಜಾಬಿ (D) ಗುಜರಾತಿ

II. ಪುಟ್ಟಪೋರಿ ಏನು ಮಾಡುತ್ತಿದ್ದಾಳೆ ?

(A) ರಂಗೋಲಿ ಬಿಡಿಸುತ್ತಿದ್ದಾಳೆ (B) ಚಿತ್ರ ಬಿಡಿಸುತ್ತಿದ್ದಾಳೆ

(C) ಮುಸುರೆ ತಿಕ್ಕುತ್ತಿದ್ದಾಳೆ (D) ಬಟ್ಟೆ ಒಗೆಯುತ್ತಿದ್ದಾಳೆ

III. _____ ಇವರಿಗೆ ವಸಂತ ಮುಖ ತೋರಲಿಲ್ಲ.

1. ಕಮ್ಮಾರ 2. ಕಾರ್ಮಿಕ

3. ನೇಕಾರ 4. ಕುಂಬಾರ

ಸರಿಯಾದ ಗುಂಪು ಆರಿಸಿ.

(A) 1, 2, 3 (B) 1, 3, 4

(C) 2, 3, 4 (D) 1, 2, 4

IV. "ಇದು ಬಹಳ ಪೂಜ್ಯನೀಯವಾದ ಮಣ್ಣು, ಜಲಿಯನ್ ವಾಲಾಬಾಗ್ ಹತ್ಯಾಕಾಂಡದಲ್ಲಿ ಹುತಾತ್ಮ-ರಾದವರ ರಕ್ತದಿಂದ ಈ ಮಣ್ಣು ಒದ್ದೆಯಾಗಿದೆ" ಎಂದು ಹೇಳಿ ಮಣ್ಣಿಗೆ ವಂದಿಸಿದವರು

(A) ಸಹೋದರಿ (B) ಕಿಶನ್‌ಸಿಂಗ್

(C) ಭಗತ್‌ಸಿಂಗ್ (D) ವೀರಮಾತೆ ವಿದ್ಯಾವತಿ

V. _____ ಇದು ಕಡಿದು ಕೊರೆದು ತೇಯ್ದರೂ ಕಂಪ ಬಿಡದು.

(A) ಚಂದನ (B) ಸುವರ್ಣ

(C) ಕಬ್ಬು (D) ಸಕ್ಕರೆ

## PART – 2 : (40 ಅಂಕಗಳು)

## SECTION – C (Writing Skill)

### ಬರವಣಿಗೆ ಕೌಶಲ್ಯ : 12 ಅಂಕಗಳು

8. ಸರಿಯಾದ ಸಮಯಕ್ಕೆ ಬಸ್ ಪಾಸ್ ಸಿಗದಿರುವುದರಿಂದ, ವಿದ್ಯಾರ್ಥಿಗಳಿಗೆ ಆಗುತ್ತಿರುವ ತೊಂದರೆಗಳನ್ನು ವಿವರಿಸಿ, ತ್ವರಿತಗತಿಯಲ್ಲಿ ಬಸ್ ಪಾಸ್ ವಿತರಿಸುವಂತೆ ವಿನಂತಿಸಿಕೊಂಡು ಸಂಬಂಧಿಸಿದ ಘಟಕ ವ್ಯವಸ್ಥಾಪಕರಿಗೆ ಪತ್ರ ಬರೆಯಿರಿ. **4**

**ಅಥವಾ (OR)**

ದಿನಾಂಕ 1-2-2025 ರ ಕನ್ನಡ ಪ್ರಭ ದಿನಪತ್ರಿಕೆಯ ಪ್ರಕಟಣೆಯ ಮೇರೆಗೆ ಬೆಂಗಳೂರಿನ ಆಕಾಶವಾಣಿ ಕೇಂದ್ರದಲ್ಲಿ ಖಾಲಿ ಇರುವ ವಾರ್ತಾ ವಾಚಕರ ಹುದ್ದೆಗೆ ಅರ್ಜಿಯನ್ನು ಬರೆಯಿರಿ.

9. ಕರ್ನಾಟಕವೆಂದು ನಾಮಕರಣಗೊಂಡು ಐವತ್ತು ವರ್ಷ ಸಂದ ಸುಸಂದರ್ಭದಲ್ಲಿ, ನಿಮ್ಮ ಶಾಲೆಯಲ್ಲಿ ಆಯೋಜಿಸಿದ್ದ ಕನ್ನಡಾಂಬೆಯ ಮೂರ್ತಿ ಅನಾವರಣ ಕಾರ್ಯಕ್ರಮದ ವರದಿಯನ್ನು ತಯಾರಿಸಿ. **4**

10. ಈ ಕೆಳಗೆ ಕೊಟ್ಟಿರುವ ವಿಷಯಗಳಲ್ಲಿ ಯಾವುದಾದರೂ **ಒಂದು** ವಿಷಯವನ್ನು ಕುರಿತು ಪ್ರಬಂಧವನ್ನು ಬರೆಯಿರಿ. **4**

    I. ಯೋಗಾಭ್ಯಾಸದ ಮಹತ್ವ

    II. ಪ್ರಾಚ್ಯ ಸ್ಮಾರಕಗಳ ಸಂರಕ್ಷಣೆ

    III. ಗ್ರಂಥಾಲಯಗಳ ಮಹತ್ವ

## SECTION – D (Descriptive type)

**ಪದ್ಯಗಳ ಅಧ್ಯಯನ : 28 ಅಂಕಗಳು**

11. ಕೆಳಗಿನ ಪ್ರಶ್ನೆಗಳಿಗೆ **ಎರಡು** ವಾಕ್ಯಗಳಲ್ಲಿ ಉತ್ತರಿಸಿ. **4 × 2 = 8**

    I. ಡಾಕ್ಟರ್‌ಗೆ ವಿಮಾನದ ಪೈಲಟ್ ಏನು ಹೇಳಿದನು ?

    II. ಲಾವಣಿಗಳನ್ನು ಏಕೆ ವೀರಗೀತೆಗಳು ಎನ್ನಲಾಗಿದೆ ?

    III. ವಿವೇಕಾನಂದರ ದೃಷ್ಟಿಯಲ್ಲಿ ದೇಶದ ಪ್ರಗತಿ ಸ್ಥಿರವಾಗುವುದು ಯಾವಾಗ ?

    IV. ಅರಿಯದವರ ಮತ್ತು ಬಲ್ಲವರೊಡನೆ ಸಂಗ ಮಾಡಿದರೆ ಆಗುವ ಪರಿಣಾಮವೇನು ?

12. ಕೆಳಗಿನ ಪ್ರಶ್ನೆಗಳಿಗೆ **5-6** ವಾಕ್ಯಗಳಲ್ಲಿ ಉತ್ತರಿಸಿ. **2 × 3 = 6**

    I. ಅಶೋಕ ಪೈ ಹೇಳಿದ ಸಂಶೋಧನಾ ಸತ್ಯವೇನು ?

    II. ಯುದ್ಧದ ವಿಚಾರದಲ್ಲಿ ಕರ್ಣನ ತೀರ್ಮಾನವೇನು ?

13. ಈ ಕೆಳಗಿನ ಪ್ರಶ್ನೆಗಳಿಗೆ ಸಂದರ್ಭ ಹಾಗೂ ಸ್ವಾರಸ್ಯದೊಡನೆ ವಿವರಿಸಿ. **2 × 3 = 6**

I. ಸಾಮಾಜಿಕ ಕಾನೂನುಗಳ ಹರಿಕಾರ

**ಅಥವಾ (OR)**

ರೂಪಿನಂತೆ ಮಾತು ಕೂಡ ಎನಿತುದಾರವಾಗಿದೆ

II. ಹೊಸ ಎಚ್ಚರದೊಳು ಬದುಕೋಣ

**ಅಥವಾ (OR)**

ಅರಸುಗಳ ವಾಜಿಯಂ ಬಿಡು

14. ಈ ಕೆಳಗಿನ ಪ್ರಶ್ನೆಗಳಿಗೆ **8-10** ವಾಕ್ಯಗಳಲ್ಲಿ ಉತ್ತರಿಸಿ. **1 × 4 = 4**

I. ಶಿಕ್ಷಣ ಕ್ಷೇತ್ರಕ್ಕೆ ವಿಶ್ವೇಶ್ವರಯ್ಯ ಅವರು ಸಲ್ಲಿಸಿದ ಕೊಡುಗೆಯನ್ನು ಬರೆಯಿರಿ.

**ಅಥವಾ (OR)**

II. ರಾಹಿಲನು ಮುದುಕಿಯ ಕುಟುಂಬಕ್ಕೂ, ಮುದುಕಿಯು ರಾಹಿಲನಿಗೂ ಮಾಡಿದ ಸಹಾಯವನ್ನು ಸಂಕ್ಷಿಪ್ತವಾಗಿ ವಿವರಿಸಿ.

15. ಈ ಕೆಳಗಿನ ಪ್ರಶ್ನೆಗಳಿಗೆ **8-10** ವಾಕ್ಯಗಳಲ್ಲಿ ಉತ್ತರಿಸಿ. **1 × 4 = 4**

I. ಪಾಂಡವರು ಸೋದರರೆಂದು ತಿಳಿದಾಗ ಕರ್ಣನ ಮನಸ್ಥಿತಿಯನ್ನು ತಿಳಿಸಿ.

**ಅಥವಾ (OR)**

II. ಪ್ರಕೃತಿಯ 'ಹಸುರು' ಜೀವ ಜಗತ್ತಿಗೆ ಎಷ್ಟು ಮುಖ್ಯ ಎಂಬುದನ್ನು ಕುರಿತು ನಿಮ್ಮ ಅಭಿಪ್ರಾಯಗಳನ್ನು ಬರೆಯಿರಿ.

---